ON EMBARGO TILL 18 MARCH 2026, 10:30 AM

## ಗ್ರಾಹಕ ನ್ಯಾಯ ವರದಿ 2026: ದೊಡ್ಡ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕಕ್ಕೆ 4ನೇ ಸ್ಥಾನ

ಬೆಂಗಳೂರು, ಮಾರ್ಚ್ 18,2025: ಇಂಡಿಯಾ ಜಸ್ಟಿಸ್ ರಿಪೋರ್ಟ್ ಬಿಡುಗಡೆ ಮಾಡಿದ ದೇಶದ ಮೊದಲ ಸಮೀಕ್ಷೆ 'ಗ್ರಾಹಕ ನ್ಯಾಯ ವರದಿ 2026: ಭಾರತದಲ್ಲಿ ಪರಿಹಾರ ಆಯೋಗಗಳ ಸಾಮರ್ಥ್ಯದ ಮೌಲ್ಯಮಾಪನ' ವರದಿಯಲ್ಲಿ, 19 ದೊಡ್ಡ ಮತ್ತು ಮಧ್ಯಮ ಗಾತ್ರದ ರಾಜ್ಯಗಳ ಪೈಕಿ ಕರ್ನಾಟಕವು ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ. ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ರಾಜಸ್ಥಾನ ಮೊದಲ ಮೂರು ಸ್ಥಾನಗಳಲ್ಲಿವೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಅಡಿಯಲ್ಲಿ ಶಾಸನಬದ್ಧ ಜವಾಬ್ದಾರಿಗಳನ್ನು ಪೂರೈಸುವ ಆಯೋಗಗಳ ಸಾಮರ್ಥ್ಯವನ್ನು ಆಧರಿಸಿ ಈ ಶ್ರೇಯಾಂಕ ನೀಡಲಾಗಿದೆ. ಬಜೆಟ್, ಮೂಲಸೌಕರ್ಯ, ಮಾನವ ಸಂಪನ್ಮೂಲ, ಕೆಲಸದ ಹೊರೆ ಮತ್ತು ಲಿಂಗ ವೈವಿಧ್ಯತೆ ಸೇರಿದಂತೆ 11 ಸೂಚಕಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಆಶಾದಾಯಕ ಬೆಳವಣಿಗೆಗಳು:**

·ಪ್ರಕರಣಗಳ ವಿಲೇವಾರಿ: 2020-2024ರ ಅವಧಿಯಲ್ಲಿ ಕರ್ನಾಟಕದ ಜಿಲ್ಲಾ ಮತ್ತು ರಾಜ್ಯ ಗ್ರಾಹಕ ಆಯೋಗಗಳು ಸರಾಸರಿ 109% ರಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಿವೆ.

·ಲಿಂಗ ಸಮಾನತೆ: 2024ರ ವೇಳೆಗೆ ರಾಜ್ಯ ಗ್ರಾಹಕ ಆಯೋಗದಲ್ಲಿ ಒಬ್ಬರು ಮಹಿಳಾ ಸದಸ್ಯರಿದ್ದು, ಕಾಯ್ದೆಯ ನಿಯಮವನ್ನು ಪಾಲಿಸಲಾಗಿದೆ.

·ಮಹಿಳಾ ಸಿಬ್ಬಂದಿ: ರಾಜ್ಯ ಗ್ರಾಹಕ ಆಯೋಗದ ಒಟ್ಟು ಸಿಬ್ಬಂದಿಯಲ್ಲಿ 43% ಮಹಿಳೆಯರಿದ್ದು, ಇದು ದೇಶದ 19 ದೊಡ್ಡ ರಾಜ್ಯಗಳಲ್ಲೇ ಅತಿ ಹೆಚ್ಚು.

·ಕಡಿಮೆ ಬಾಕಿ ಪ್ರಕರಣ: ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಬಾಕಿ ಇರುವ ಪ್ರಕರಣಗಳ ಸಂಖ್ಯೆಯಲ್ಲಿ 88%ಕರ್ನಾಟಕ (28%) ಮೂರನೇ ಅತ್ಯಂತ ಕಡಿಮೆ ರಾಜ್ಯವಾಗಿದೆ (ಆಂಧ್ರಪ್ರದೇಶ ಮತ್ತು ರಾಜಸ್ಥಾನದ ನಂತರ).

·ಹುದ್ದೆಗಳ ಭರ್ತಿ: 2025ರ ಮಾಹಿತಿಯಂತೆ, ರಾಜ್ಯ ಗ್ರಾಹಕ ಆಯೋಗದಲ್ಲಿ ಅಧ್ಯಕ್ಷರ ಹುದ್ದೆ ಖಾಲಿ ಇತ್ತು. ಅಲ್ಲದೆ, ಸದಸ್ಯರ ಹುದ್ದೆಗಳಲ್ಲಿ 88% ಮತ್ತು ಜಿಲ್ಲಾ ಆಯೋಗಗಳಲ್ಲಿ ಅಧ್ಯಕ್ಷರ ಹುದ್ದೆಗಳಲ್ಲಿ 42% ರಷ್ಟು ಕೊರತೆಯಿದೆ.

·ಬೆಂಗಳೂರಿನ ಸ್ಥಿತಿ: ಬೆಂಗಳೂರಿನ ಮೂರು ಜಿಲ್ಲಾ ಆಯೋಗಗಳಲ್ಲಿ ಪ್ರಕರಣ ವಿಲೇವಾರಿ ದರವು 2022ರಲ್ಲಿ 96% ಇತ್ತು, ಆದರೆ 2024ರ ವೇಳೆಗೆ ಇದು 50% ಕ್ಕೆ ಕುಸಿದಿದೆ.

·ಬೆಂಗಳೂರು ನಗರ ಜಿಲ್ಲಾ ಆಯೋಗವನ್ನು ಹೊರತುಪಡಿಸಿ, ಉಳಿದೆಲ್ಲಾ ಆಯೋಗಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳು ಭರ್ತಿಯಾಗಿವೆ.

·ಬೆಂಗಳೂರಿನ 'ಅರ್ಬನ್ 2ನೇ ಹೆಚ್ಚುವರಿ ಜಿಲ್ಲಾ ಆಯೋಗ' ಮಾತ್ರ ಮಹಿಳಾ ಅಧ್ಯಕ್ಷರನ್ನು ಹೊಂದಿದೆ.

·ಅಧ್ಯಯನಕ್ಕೆ ಒಳಪಟ್ಟ ಬೆಂಗಳೂರಿನ ನಾಲ್ಕು ಜಿಲ್ಲಾ ಆಯೋಗಗಳು ತಮಗೆ ಹಂಚಿಕೆಯಾದ

ಅನುದಾನವನ್ನು 100% ಬಳಕೆ ಮಾಡಿಕೊಂಡಿವೆ.

ಗ್ರಾಹಕ ಆಯೋಗಗಳ ವ್ಯಾಪ್ತಿ (2021ರ ನಿಯಮದಂತೆ):

·ಜಿಲ್ಲಾ ಆಯೋಗ (DCDRC): 50 ಲಕ್ಷ ರೂಪಾಯಿಗಳವರೆಗಿನ ದೂರುಗಳು.

·ರಾಜ್ಯ ಆಯೋಗ (SCDRC): 50 ಲಕ್ಷದಿಂದ 2 ಕೋಟಿ ರೂಪಾಯಿಗಳವರೆಗಿನ ದೂರುಗಳು.

·ರಾಷ್ಟ್ರೀಯ ಆಯೋಗ (NCDRC): 2 ಕೋಟಿ ರೂಪಾಯಿಗಿಂತ ಹೆಚ್ಚಿನ ಮೌಲ್ಯದ ದೂರುಗಳು.

**The ranking of states is below:**

**19 Large and mid-sized states:**

| State | Consumer Justice Rank |
|---|---|
| Andhra Pradesh | 1 |
| Madhya Pradesh | 2 |
| Rajasthan | 3 |
| Karnataka | 4 |
| West Bengal | 5 |
| Haryana | 6 |
| Tamil Nadu | 7 |
| Assam | 8 |
| Uttarakhand | 9 |

**9 Small states:**

| State | Consumer Justice Rank |
|---|---|
| Meghalaya | 1 |
| Sikkim | 2 |
| Himachal Pradesh | 3 |
| Goa | 4 |
| Nagaland | 5 |
| Mizoram | 6 |
| Tripura | 7 |
| Arunachal Pradesh | 8 |
| Manipur | 9 |

| | |
|---|---|
| Uttar Pradesh | 10 |
| Maharashtra | 11 |
| Kerala | 12 |
| Bihar | 13 |
| Gujarat | 14 |
| Punjab | 15 |
| Odisha | 16 |
| Chhattisgarh | 17 |
| Jharkhand | 18 |
| Telangana | 19 |

ವರದಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಸುಪ್ರೀಂ ಕೋರ್ಟ್ನ ನಿವೃತ್ತ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್, "ಶಾಸನಗಳು ಜಾರಿಯಾದಾಗ ಅವು ಕಾರ್ಯನಿರ್ವಹಿಸುವಂತಿರಬೇಕು. ಆದರೆ ಗ್ರಾಹಕ ಆಯೋಗಗಳಲ್ಲಿ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳು ಖಾಲಿ ಇರುವುದು ಕಳವಳಕಾರಿ. ಇದು ಗ್ರಾಹಕರಿಗೆ ಸಿಗಬೇಕಾದ ತ್ವರಿತ ನ್ಯಾಯಕ್ಕೆ ಅಡ್ಡಿಯಾಗುತ್ತದೆ," ಎಂದರು.

ಇನ್ನೊಬ್ಬ ನಿವೃತ್ತ ನ್ಯಾಯಮೂರ್ತಿ ಮದನ್ ಬಿ. ಲೋಕೂರ್ ಮಾತನಾಡಿ, "ಗ್ರಾಹಕ ಸಂರಕ್ಷಣಾ ವ್ಯವಸ್ಥೆಯು ಕೇವಲ ಅಸ್ತಿತ್ವಕ್ಕಾಗಿ ಹೋರಾಡುತ್ತಿರುವಂತೆ ಕಾಣುತ್ತಿದೆ. ಗ್ರಾಹಕರಿಗೆ ಈ ವ್ಯವಸ್ಥೆಯ ಮೇಲೆ ನಂಬಿಕೆ ಕಡಿಮೆಯಾದರೆ ಅದು ಆರ್ಥಿಕ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತದೆ," ಎಂದು ಎಚ್ಚರಿಸಿದರು.
ಇಂಡಿಯಾ ಜಸ್ಟಿಸ್ ರಿಪೋರ್ಟ್ನ ಎಡಿಟರ್ ಮಾಜಾ ದಾರುವಾಲಾ ಅವರು, "ಮಾಹಿತಿ ಹಕ್ಕು ಕಾಯ್ದೆಯಡಿ ಲಭ್ಯವಾದ ದತ್ತಾಂಶಗಳು ಆಯೋಗಗಳಲ್ಲಿ ನಾಯಕತ್ವದ ಕೊರತೆ ಮತ್ತು ಖಾಲಿ ಹುದ್ದೆಗಳ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತವೆ," ಎಂದು ತಿಳಿಸಿದರು.

**For further details, please contact:**

**Valay Singh**
India Justice Report (indiajusticereport.org)
E: valaysingh@gmail.com
M: 9717676026

**About the India Justice Report:**

*The India Justice Report (IJR) is a quantitative index that uses the government's own statistics to rank the capacity of the formal justice system operating in various states. The IJR is a collaborative effort undertaken by DAKSH, Commonwealth Human Rights Initiative, Common Cause, Centre for Social Justice, Vidhi Centre for Legal Policy and TISS-Prayas.*

*First published in 2019, each biennial report tracks improvements and persisting deficits in each state's structural and financial capacity to deliver justice based on quantitative measurements of budgets, human resources, infrastructure, workload, and diversity across police, judiciary, prisons, legal aid and Human Rights Commissions for all 36 states and UTs.*

## Annexure I: Consumer Justice Ranking Indicators

| S.No | Ranked indicator | Commission measured | Source | Time period |
|---|---|---|---|---|
| 1 | President vacancy | State Commissions | Lok Sabha Unstarred Question No. 5127, answered on 02.04.2025. | 2025 |

| | | | | |
|---|---|---|---|---|
| 2 | Member vacancy | State Commissions | Lok Sabha Unstarred Question No. 5127, answered on 02.04.2025. | 2025 |
| 3 | President vacancy | District Commissions | Lok Sabha Unstarred Question No. 5127, answered on 02.04.2025. | 2025 |
| 4 | Member vacancy | District Commissions | Lok Sabha Unstarred Question No. 5127, answered on 02.04.2025 | 2025 |
| 5 | Staff vacancy | State Commissions | RTI | 2025 |
| 6 | Women among president and members | State Commissions | RTI | 2024 |
| 7 | Women share among staff | State Commissions | RTI | 2024 |
| 8 | Case clearance rate | State and District Commissions | Lok Sabha Unstarred Question No. 4320, answered on 26.03.2025 | 2020 to 2024 |
| 9 | Cases pending (%) for more than three years | State Commissions | RTI | 2025 |
| 10 | District commissions as a percentage of districts | District Commissions | Lok Sabha Unstarred Question No. 4320, answered on 26.03.2025 | 2025 |
| 11 | Budget utilisation | State Commissions | RTI | F.Y. 2024-25 |